**ಪಶು ಸಂಗೋಪನಾ ಇಲಾಖೆ ನೇಮಕಾತಿ**

**727 (1036) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :** ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಗಳಲ್ಲಿ ಮಂಜೂರಾದ ಎಲ್ಲಾ ಶ್ರೇಣಿಯ ಹುದ್ದೆಗಳೆಷ್ಟು;

ಆ) ಅದರಲ್ಲಿ ಸಧ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;

ಇ) ಮಂಜೂರಾತಿ ಇದ್ದರೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಹಾಗೂ ಎಷ್ಟು ವರ್ಷಗಳಿಂದ ಖಾಲಿಯಿರುವುದು;

ಈ) ಕುಂದಗೋಳ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಖಾಲಿ ಹುದ್ದೆಗಳನ್ನು ಈ ಸಾಲಿನಲ್ಲಿಯೇ ಭರ್ತಿ ಮಾಡಲು ಸರ್ಕಾರಕ್ಕೆ ಸಾಧ್ಯವಿದೆಯೇ;

ಉ) ಸಾಧ್ಯವಿದಲ್ಲಿ, ಎಂದು ಭರ್ತಿ ಮಾಡಲಾಗುವುದು?

**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :**

ಅ) 411.

ಆ) 310.

ಇ) 101.

ಸುಮಾರು 2 ರಿಂದ 3 ವರ್ಷಗಳಿಂದ ಖಾಲಿ ಇದೆ.

ಈ) ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

**ಹೊಸದಾಗಿ ಪ್ರೌಢಶಾಲೆ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ**

**729 (1038) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡಿದೆ;

ಆ) ಹೊಸದಾಗಿ ಮಂಜೂರಾತಿ ನೀಡುವ ವಿಷಯ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಕುಂದಗೋಳ ಮತ ಕ್ಷೇತ್ರಕ್ಕೆ ಅವಶ್ಯಕವಾಗಿ ಬೇಕಾಗಿರುವ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿಯನ್ನು ಎಂದು ನೀಡಲಾಗುವುದು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಹೊಸದಾಗಿ ಮಂಜೂರಾತಿ ನೀಡಿದ ಸರ್ಕಾರಿ ಪ್ರೌಢ ಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ. | ವರ್ಷ | ಮಂಜೂರಾದ | |
|---|---|---|---|
| | | ಪ್ರೌಢ ಶಾಲೆಗಳು | ಪ್ರಥಮ ದರ್ಜೆ ಕಾಲೇಜುಗಳು |
| 1 | 2007–08 | 609 | 163 |
| 2 | 2008–09 | – | – |
| 3 | 2009–10 | – | – |

ಆ) ಅನುದಾನ ಹಾಗೂ ಅವಶ್ಯಕತೆಯನ್ನು ಆಧರಿಸಿ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈಗಾಗಲೇ ಮಂಜೂರಾತಿ ನೀಡಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಕುಂದಗೋಳ ಮತಕ್ಷೇತ್ರದಲ್ಲಿ ದೇವನೂರು, ಶಿರೂರು ಚಾಕಲಬ್ಬಿ ಪಶುಪತಿಹಾಳ, ಮತ್ತು ಯರಿನಾರಾಯಣಪುರ ಗ್ರಾಮಗಳಿಗೆ ಪ್ರೌಢಶಾಲೆ ಮಂಜೂರಾತಿಗಾಗಿ ಬೇಡಿಕೆ ಇದ್ದು, ಅನುದಾನ ಹಾಗೂ ಅವಶ್ಯಕತೆಯನ್ನು ಆಧರಿಸಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.